# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೧<br>**Part – I** | ಬೆಂಗಳೂರು, ಬುಧವಾರ, ೦೧, ಜುಲೈ, ೨೦೨೬ (ಆಷಾಢ, ೧೦, ಶಕವರ್ಷ, ೧೯೪೮)<br>BENGALURU, WEDNESDAY, 01, JULY, 2026 (ASHADHA, 10, SHAKAVARSHA, 1948) | ನಂ. ೪೭೬<br>No. 476 |


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಾನ್ಯ ಅಡ್ವೋಕೇಟ್ ಜನರಲ್‌ರವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ವಕೀಲರು ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು ಹಾಗೂ ಹಿರಿಯ ಶ್ರೇಣಿ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಸರ್ಕಾರಿ ವಕೀಲರು / ಅಪರ ಜಿಲ್ಲಾ ಸರ್ಕಾರಿ ವಕೀಲರುಗಳು / ಅಪರ ಸರ್ಕಾರಿ ವಕೀಲರುಗಳಿಗೆ ರಿಟೇನರ್ ಫೀ ಪಾವತಿಸುವ ಕುರಿತು authorization ನೀಡುವ ಕುರಿತು.

**ಓದಲಾಗಿದೆ:** 1.ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 06 ಟಿಎಆರ್ 2020, ದಿನಾಂಕ: 04.03.2020.

2. Senior Deputy Accountant General (GE), Office of the Principal Accountant General (A & E), Karnataka ಇವರ ಪತ್ರ ಸಂಖ್ಯೆ. GE13/Genl/2025-26/360, ದಿನಾಂಕ: 16.03.2026.

**ಪ್ರಸ್ತಾವನೆ**:

ಮೇಲೆ ಓದಲಾದ ಕ್ರ.ಸಂ. (1)ರ ದಿನಾಂಕ: 04.03.2020ರ ಆರ್ಥಿಕ ಇಲಾಖೆಯ ಸರ್ಕಾರದ ಆದೇಶದಲ್ಲಿ, ಸರ್ಕಾರಿ ವಕೀಲರುಗಳಿಗೆ ರಿಟೇನರ್ ಪೀ ಪಾವತಿಸುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯವಿಧಾನಗಳನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

1. ಉಚ್ಚ ನ್ಯಾಯಾಲಯ, ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳು ಮತ್ತು ಕೆಎಟಿ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಕೀಲರುಗಳಿಗೆ ಅಡ್ವೋಕೇಟ್ ಜನರಲ್, ಕರ್ನಾಟಕ, ಬೆಂಗಳೂರು ಇವರು ಮಹಾಲೇಖಪಾಲರ ಪ್ರಾಧಿಕಾರದಂತೆ ರಿಟೇನರ್ ಫೀಗಳನ್ನು ಖಜಾನೆ-2ರಲ್ಲಿ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದು ಸಂಬಂಧಿಸಿದ ಸರ್ಕಾರಿ ವಕೀಲರುಗಳ ಬ್ಯಾಂಕ್ ಖಾತೆಗಳಿಗೆ online ಮೂಲಕ ಪಾವತಿಸುವುದನ್ನು ಮುಂದುವರೆಸುವುದು.
2. ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ವಕೀಲರುಗಳು ತಮ್ಮ ಮಾಸಿಕ ರಿಟೇನರ್ ಫೀಗಳ ಕ್ಲೇಂಗಳನ್ನು ಸಂಬಂಧಿಸಿದ ನ್ಯಾಯಾಲಯಗಳಿಂದ ಪಡೆದ ಹಾಜರಾತಿ ಪ್ರಮಾಣ ಪತ್ರದೊಂದಿಗೆ ಸಂಬಂಧಿಸಿದ

ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (Deputy Commissioner) ಸಲ್ಲಿಸುವುದು. ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಕ್ಲೇಂಗಳನ್ನು ಪರಿಶೀಲಿಸಿ ಮಹಾಲೇಖಪಾಲರ ಪ್ರಾಧಿಕಾರದ ಆಧಾರದ ಮೇಲೆ ಆಯಾ ಜಿಲ್ಲೆಯ ಜಿಲ್ಲಾ ಖಜಾನೆಗಳಿಂದ ಖಜಾನೆ-2ರಲ್ಲಿ ಸಾದಿಲ್ವಾರು ಬಿಲ್ಲುಗಳ ಮೂಲಕ ಕ್ಲೇಂ ಅನ್ನು ಸೆಳೆದು ಸಂಬಂಧಿಸಿದ ಸರ್ಕಾರಿ ವಕೀಲರುಗಳ ಬ್ಯಾಂಕ್ ಖಾತೆಗಳಿಗೆ online ಮೂಲಕ ಪಾವತಿಸುವುದು.

3. ಅಡ್ವೋಕೇಟ್ ಜನರಲ್ (ಸಿಸಿಓ)ರವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಡಿಡಿಓ ಕೋಡ್‌ಗೆ ರಿಟೇನರ್ ಫೀಗಳ ಕ್ಲೇಂಗಳಿಗಾಗಿ ಲೆಕ್ಕ ಶೀರ್ಷಿಕೆ: 2014-00-114-0-01-034ರಡಿ ಅವಶ್ಯಕ ಅನುದಾನವನ್ನು ಖಜಾನೆ-2ರಲ್ಲಿ ಬಿಡುಗಡೆ ಮಾಡುವುದು.
4. ಮಹಾಲೇಖಪಾಲರು ಜಿಲ್ಲಾ ಸರ್ಕಾರಿ ವಕೀಲರು ಮತ್ತು ಸಹಾಯಕ ಸರ್ಕಾರಿ ವಕೀಲರುಗಳ ರಿಟೇನರ್ ಫೀ ಪೇ ಸ್ಲಿಪ್‌ಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನೀಡುವುದು.
5. ಮೇಲ್ಕಂಡ ವೆಚ್ಚಗಳ ಲೆಕ್ಕ ಸಮನ್ವಯೀಕರಣವನ್ನು ಸಂಬಂಧಿಸಿದ ಡಿಡಿಓ ಹಾಗೂ ಸಿಸಿಓರವರು ನಿಯಮಾನುಸಾರ ನಿಗದಿತವಾಗಿ ನಿರ್ವಹಿಸುವುದು.

ಮೇಲೆ ಓದಲಾದ ಕ್ರ.ಸಂ. (2)ರ ದಿನಾಂಕ: 16.03.2026ರ ಪತ್ರದಲ್ಲಿ Senior Deputy Accountant General (GE), Office of the Principal Accountant General (A & E), Karnataka ಇವರು ಸರ್ಕಾರಿ ವಕೀಲರುಗಳಿಗೆ ಈ ಹಿಂದಿನಿಂದಲೂ pay slip ನೀಡುವ ಪದ್ಧತಿಯು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದ್ದು, ಸರ್ಕಾರಿ ವಕೀಲರುಗಳ ಸೇವೆಯು The Karnataka Civil Services Rules (KCSR) ನಿಯಮಗಳಡಿ ಬರುವುದಿಲ್ಲವೆಂದು ಹಾಗೂ ಸದರಿ ನಿಯಮಗಳಡಿಯಲ್ಲಿ Gazetted Officersಗಳಿಗೆ ಮಾತ್ರ pay slip ನೀಡಬೇಕಾಗಿರುವುದಾಗಿಯೂ ಹಾಗೂ ಸರ್ಕಾರಿ ವಕೀಲರುಗಳ ಸೇವೆಯು overlap ಆಗುತ್ತಿರುವುದರಿಂದ ಸದರಿ ಸರ್ಕಾರಿ ವಕೀಲರುಗಳಿಗೆ pay slip ನೀಡಲು ಕಷ್ಟಸಾಧ್ಯವಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಅಕೌಂಟೆಂಟ್ ಜನರಲ್‌ರವರ ಕಛೇರಿಯಿಂದ pay slip ನೀಡಲು ಸಾಧ್ಯವಿಲ್ಲವೆಂದು ಹಾಗೂ ಈ ಸಂಬಂಧವಾಗಿ ಒಂದು ಸುಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಲಾ-ಎಲ್‌ಎಡಿ/209/2026**
**ಬೆಂಗಳೂರು, ದಿನಾಂಕ: 25.06.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಅಡ್ವೋಕೇಟ್ ಜನರಲ್‌ರವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ವಕೀಲರು / ರಾಜ್ಯ ಸರ್ಕಾರಿ ಅಭಿಯೋಜಕರು / ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರು / ಅಪರ ಸರ್ಕಾರಿ ವಕೀಲರು ಮತ್ತು ಉಚ್ಚ ನ್ಯಾಯಾಲಯ ಸರ್ಕಾರಿ ಪ್ಲೀಡರ್ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು ಹಾಗೂ ಹಿರಿಯ ಶ್ರೇಣಿ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಸರ್ಕಾರಿ ವಕೀಲರು / ಅಪರ ಜಿಲ್ಲಾ ಸರ್ಕಾರಿ ವಕೀಲರುಗಳು / ಅಪರ ಸರ್ಕಾರಿ ವಕೀಲರುಗಳಿಗೆ ಮಾಸಿಕ ರಿಟೇನರ್ ಫೀ ಪಾವತಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 04.03.2020ರ ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 06 ಟಿಎಆರ್ 2020ರಲ್ಲಿ ನಿಗದಿಪಡಿಸಿರುವ ಈ ಕೆಳಕಂಡ ಕಾರ್ಯವಿಧಾನಗಳೊಂದಿಗೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಆಡಳಿತ-2)ಯಿಂದ authorization ನೀಡಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ.

**ಕಾರ್ಯವಿಧಾನಗಳು:**

1. ಅಡ್ವೋಕೇಟ್ ಜನರಲ್‌ರವರ ಕಛೇರಿ, ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳು ಮತ್ತು ಕೆಎಟಿ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಕೀಲರುಗಳಿಗೆ ಅಡ್ವೋಕೇಟ್ ಜನರಲ್, ಕರ್ನಾಟಕ, ಬೆಂಗಳೂರು ಇವರು ಕಾನೂನು,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಆಡಳಿತ-2) ಪ್ರಾಧಿಕಾರದಂತೆ ರಿಟೇನರ್ ಫೀಗಳನ್ನು ಖಜಾನೆ-2ರಲ್ಲಿ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದು ಸಂಬಂಧಿಸಿದ ಸರ್ಕಾರಿ ವಕೀಲರುಗಳ ಬ್ಯಾಂಕ್ ಖಾತೆಗಳಿಗೆ online ಮೂಲಕ ಪಾವತಿಸುವುದನ್ನು ಮುಂದುವರೆಸುವುದು.

2. ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು ಹಾಗೂ ಹಿರಿಯ ಶ್ರೇಣಿ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಸರ್ಕಾರಿ ವಕೀಲರು / ಅಪರ ಜಿಲ್ಲಾ ಸರ್ಕಾರಿ ವಕೀಲರು / ಅಪರ ಸರ್ಕಾರಿ ವಕೀಲರುಗಳು ತಮ್ಮ ಮಾಸಿಕ ರಿಟೇನರ್ ಫೀಗಳ ಕ್ಲೇಂಗಳನ್ನು ಸಂಬಂಧಿಸಿದ ನ್ಯಾಯಾಲಯಗಳಿಂದ ಪಡೆದ ಹಾಜರಾತಿ ಪ್ರಮಾಣ ಪತ್ರದೊಂದಿಗೆ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (Deputy Commissioner) ಸಲ್ಲಿಸುವುದು. ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಕ್ಲೇಂಗಳನ್ನು ಪರಿಶೀಲಿಸಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಆಡಳಿತ-2)ಯ ಪ್ರಾಧಿಕಾರದ ಆಧಾರದ ಮೇಲೆ ಆಯಾ ಜಿಲ್ಲೆಯ ಜಿಲ್ಲಾ ಖಜಾನೆಗಳಿಂದ ಖಜಾನೆ-2ರಲ್ಲಿ ಸಾದಿಲ್ವಾರು ಬಿಲ್ಲುಗಳ ಮೂಲಕ ಕ್ಲೇಂ ಅನ್ನು ಸೆಳೆದು ಸಂಬಂಧಿಸಿದ ಸರ್ಕಾರಿ ವಕೀಲರುಗಳ ಬ್ಯಾಂಕ್ ಖಾತೆಗಳಿಗೆ online ಮೂಲಕ ಪಾವತಿಸುವುದು.
3. ಅಡ್ವೋಕೇಟ್ ಜನರಲ್ (ಸಿಸಿಓ)ರವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಡಿಡಿಓ ಕೋಡ್‌ಗೆ ರಿಟೇನರ್ ಫೀಗಳ ಕ್ಲೇಂಗಳಿಗಾಗಿ ಲೆಕ್ಕ ಶೀರ್ಷಿಕೆ: 2014-00-114-0-01-034ರಡಿ ಅವಶ್ಯಕ ಅನುದಾನವನ್ನು ಖಜಾನೆ-2ರಲ್ಲಿ ಬಿಡುಗಡೆ ಮಾಡುವುದು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಆಡಳಿತ-2) ಇವರು ಜಿಲ್ಲಾ ಸರ್ಕಾರಿ ವಕೀಲರು / ಅಪರ ಜಿಲ್ಲಾ ಸರ್ಕಾರಿ ವಕೀಲರು / ಅಪರ ಸರ್ಕಾರಿ ವಕೀಲರುಗಳ ರಿಟೇನರ್ ಫೀಗೆ ಸಂಬಂಧಿಸಿದ authorizationನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಆಡಳಿತಾಧಿಕಾರಿ, ಅಡ್ವೋಕೇಟ್ ಜನರಲ್‌ರವರ ಕಛೇರಿಗೆ ನೀಡುವುದು.
5. ಮೇಲ್ಕಂಡ ವೆಚ್ಚಗಳ ಲೆಕ್ಕ ಸಮನ್ವಯೀಕರಣವನ್ನು ಸಂಬಂಧಿಸಿದ ಡಿಡಿಓ ಹಾಗೂ ಸಿಸಿಓರವರು ನಿಯಮಾನುಸಾರ ನಿಗದಿತವಾಗಿ ನಿರ್ವಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ. ಆಇ 184 ವೆಚ್ಚ-10/2026(e), ದಿನಾಂಕ: 22.06.2026ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಆದಿನಾರಾಯಣ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು